ಎದುರಾಗಿ, ಪದ್ಮಾಸನದಲ್ಲಿ ಧ್ಯಾನಸ್ಥವಾಗಿ ಕುಳಿತ ಮಾನವ ಪ್ರತಿಚ್ಛಾಯೆಯು ಕಡೆದು ಮೂಡಿಸಿದಂತೆ ಕಂಡಿತು!

ಯುವತಿ ಮರ ಮರಳಿ ನೋಡುತ್ತಿದ್ದಳು. ಅವಳ ಹೃದಯ ಅರಳಿ ಅದೇನನ್ನೊ ಬೇಡುತ್ತಿತ್ತು. ಉದ್ವೇಗಕ್ಕೆ ಒಳಗಾದ ಅವಳು ತನ್ನ ಚಿತ್ತವನ್ನು ಏಕೋ ಕಾಡುತ್ತಿದ್ದಳು. ನೆನಪು ಹೊಳೆಯಿತು: ಕನಸು ದೇವಿಯ ಪುರುಷ ಹರುಷ ಮೂರ್ತಿಯಿವನೆ?

ಕಾಷಾಯಧಾರಿಯೂ ಪಾವನ ಜಟಾಧಾರಿಯೂ ಆಗಿ ಮನ್ಮಥನಿಗೆ ಸಮನಾಗಿ, ಪಾಲಾಕ್ಷ ಸದೃಶನಾಗಿದ್ದಾನೆ. ದೇವ ವಂದಿತ ಮೋಹನಾಕೃತಿಯ ನರನಿವನೇ? ಹೊಳೆವ ಕೆಂಬಣ್ಣದಲ್ಲಿ ಮಿಂದಿರುವ ಇವನು ಅವನೆಯೆ?

ತಪಸ್ಸಿನಲ್ಲಿ ಇರುವವನಾಗಿ, ತಾಪಸನ ತೇಜಸ್ಸೆ ಸೌಂದರ್ಯ ಶರೀರವನ್ನು ತಾಳಿ ಇಳೆಗೆ ಬಂದು ಆ ಮೋಹನಾಂಗಿಯನ್ನು ಮೋಹಿಸಿ ಅಳುಕಿಸಿತ್ತು. ಕನ್ಯೆ ಚಿತ್ರಾಂಗಿಯ ಎಳೆಹೃದಯದಲ್ಲಿ ಪ್ರಣಯದ ಮೊದಲ ಆಕರ್ಷಣೆ ಮೊಳೆಯಿತು!

## ಪಡಿನೆಳಲಿನಿಂದೆ ನಿರುತಕ್ಕೆ ದಿಟ್ಟಯಟ್ಟಲ್

ಚಿತ್ರಾಂಗಿಯು ಪ್ರತಿಬಿಂಬದಿಂದ ಸತ್ಯವಾದುದಕ್ಕೆ ದೃಷ್ಟಿ ಹರಿಸಿದಳು. ಆಗ ಅಲ್ಲಿ ಬನವೇ ಹಿನ್ನೆಲೆಯಾಗಿರಲು, ಅರ್ಧ ಮುಳುಗಿ ಮಗ್ಗುಲಿಕ್ಕಿದ ಆನೆಯ ರೀತಿಯಲ್ಲಿ ಕೆರೆಯ ದಡದಲ್ಲಿ ನೀರಿನಿಂದೆದ್ದ ಆನೆಯ ಶಿರದಂತೆ – ತಪೋವ್ಯಕ್ತಿಯ ಪವಿತ್ರ ಆಕೃತಿ ಸ್ಪಷ್ಟವಾಗಿ ಕಾಣಿಸಿತು!

ಚಿಗುರಿದ ಪ್ರಣಯಾನುರಾಗವು ಕುಡಿಯೊಡೆದು ಹಬ್ಬುವಂತೆ, ಯೌವನ ನವೀನ ಮಾವಿನ ಮರದ ಪವಿತ್ರ ಸನ್ನಿಧಿಗೆ ಲಲನೆಯು ನಿಧಾನವಾಗಿ ನಡೆದಳು. ವೈರಾಗಿಯಿದ್ದ ದಡದ ಎಡೆಗೆ ಕುತೂಹಲಭರಿತಳಾಗಿ ಸಾಗಿದಳು. ವ್ಯಾಮೋಹದಿಂದ ಅವನ ಬಳಿಗೆ ಹೋಗಲು, ಅವಳ ಚಲನೆ ಚಂಚಲಗೊಂಡಿತು. ನಡಿಗೆ ತಡವರಿಸಿತು. ಕಣ್ಣು ಎವೆಯಿಕ್ಕದಂತಾಯಿತು. ಎದೆ ಗದಗದಿಸಿ, ಮೈ ರೋಮಾಂಚನಗೊಂಡಿತು.

ಮಣಿಪುರದ ರಾಜನ ಮಗಳು ತನ್ನ ವೇಷದ ಆವೇಶದಲ್ಲಿ, ವಿದ್ಯೆಯಲ್ಲಿ, ಬಿಲ್ಲ ಪ್ರಾವೀಣ್ಯದಲ್ಲಿ, ವೀರತನದಲ್ಲಿ, ಕೆಚ್ಚೆದೆಯ ಕಾರ್ಯದಲ್ಲಿ, ಧೀರ ನಡೆನುಡಿಯಲ್ಲಿ ಲಜ್ಜೆ ಅರಿಯದವಳಾಗಿದ್ದಳು. ಅಂತಹವಳು ಮೊಟ್ಟ ಮೊದಲಿಗೆ ಅಬಲತಾ ಭಾವದಿಂದ, ಹೆಣ್ತನದ ತಿಳಿವಳಿಕೆಯನ್ನು ಅನುಭವಿಸಿ ನಿಂತಳು!

ಓ ಮಾಯೆ, ರತಿಯೆ, ಓ ಕಲಾಸುಂದರಿಯೆ, ನೀನು ನಿರ್ಲಿಪ್ತ ನಿಶ್ಚಿಂತ ನಿರ್ಗುಣ ಬ್ರಹ್ಮದಲ್ಲಿ ಶಕ್ತಿಯನ್ನು ಸೃಷ್ಟಿಯ ಆಸಕ್ತಿಯನ್ನು ಕೆರಳಿಸಿದ ಮೋಹಿನಿ. ನೀನು ಪ್ರೇಮ ಸೌಂದರ್ಯ ರೂಪದಿಂದ ಸುಳಿದು ವಿಶ್ವವನ್ನು ಶುಷ್ಕತಾ ಶೂನ್ಯಕ್ಕೆ ಬಿಡದಂತೆ ಕಾಪಾಡುವ ರಸಚೇತನೆ. ನಿನ್ನ ಚೆಲುವಾದ ಬಂಧನಾ ಆಲಿಂಗನಕ್ಕೆ ಸಿಕ್ಕಿ ಶಶಿ ಸೂರ್ಯ ಗ್ರಹಗೋಷ್ಠಿ ತಾರೆಗಳು ನಡೆಯುತ್ತಿವೆ. ಹಾಗಿರಲು ಹೆಣ್ಣೊರ್ವಳು ಅದರಂತೆಯೇ ಆಗುವುದು ಸೋಜಿಗವೆ ಹೇಳು?

ಚೈತ್ರ ಮಧುಮಾಸದ ಬೆಳಗಿನ ಹೊಳೆಯು ಕಾಡಿನ ಹೃದಯದಲ್ಲಿ ಜೀವಲಕ್ಷಣವಾಗಿ ಬೇರು ಬೇರುಗಳಲ್ಲಿ, ಕೊಂಬೆಯಲ್ಲಿ, ಎಲೆ ಎಲೆಗಳ ಅಂತರಂಗದಲ್ಲಿ, ಮುದ್ದು ಮೊಗ್ಗಿನಲ್ಲಿ, ಹೂವಿನಲ್ಲಿ, ಬಳ್ಳಿಯಲ್ಲಿ ತರು ಶರೀರದ ನಾಡಿ ನಾಡಿಯಲ್ಲಿ ಹರಿಯುವುದು. ಅದು ಪ್ರಾಣಿ ಪಕ್ಷಿಗಳ ಪ್ರಾಣ ಪಾತ್ರದಲ್ಲಿ, ತೃಣ ತೃಣಗಳ ಜೀವನ ಪಾತಿಗಳಲ್ಲಿ ತುಂಬಿ ಹರಿಯುವ ಸ್ಫೂರ್ತಿ ಮಾಧುರ್ಯ ಝರಿಣಿ. ಅದರಂತೆ ಚಿತ್ರಾಂಗದೆಯ ಜೀವ ಪರ್ವತದ ನೆತ್ತಿಯಿಂದ ಧುಮುಕಿ ಹೃದಯದ ಗವಿಯಲ್ಲಿ ಪ್ರಣಯ ಪ್ರಪಂಚವನ್ನು ಮಥಿಸಿತು! ಲಲನೆಯು ಚಿತ್ರ ಬರೆದಂತೆ ಸೋತು ನಿಂತಳು!

ಹಕ್ಕಿಗಳು ಹಾಡಿದವು; ತುಂಬಿಗಳು ಝೇಂಕರಿಸಿದವು; ತಂಗಾಳಿ ಬೀಸಿತು. ಹೂವುಗಳು ಕಂಪನ್ನು ಹರಡಿದುವು. ಕಾಡು ಕಳಕಳಿಸಿ ನಗುತ್ತಲಿತ್ತು. ಸರೋವರವು ಕನ್ನಡಿಯಂತೆ ವಿಸ್ತಾರವಾಗಿ ಹಬ್ಬಿತ್ತು. ಮುಗಿಲು ತಿಳಿಯಾದ ಆಗಸದಿಂದ ಮೆಲ್ಲನೆ ನಿಧಾನವಾಗಿ ಚಲಿಸುತ್ತ, ಸರೋವರದ ಎದೆಯಲ್ಲಿ ನೆರಳನ್ನು ಚೆಲ್ಲಿತ್ತು. ಇಳೆಯ ಎದೆಯ ಮೇಲೆ ಹೊಂಬಿಸಿಲು ವಿಸ್ತಾರವಾಗಿ ಹರಡಿಕೊಂಡಿತ್ತು.

ಕಣ್ತೆರೆದನೊಯ್ಯನೆಯೆ ಧ್ಯಾನದಿಂದಿಳಿತಂದು ದಿವ್ಯ ತೇಜಸ್ವಿ.

ಅಲ್ಲಿ ಪ್ರತಿಯೊಂದು ಕ್ಷಣವು ಯುಗವಾಗಿ ಕಳೆಯುತ್ತಿತ್ತು. ಹೊತ್ತೇರಿದಂತೆ ಬಿಸಿಲು ಬೆಳೆಯುತ್ತಿತ್ತು. ಹೀಗಿರಲು ದಿವ್ಯ ತೇಜಸ್ವಿಯು ಧ್ಯಾನದಿಂದ ಇಳಿದು ಬಂದಂತೆ ನಿಧಾನವಾಗಿ ಕಣ್ಣು ತೆರೆದನು. ಮುಂದೆ ನಿಂತಿದ್ದ ತರುಣ ವೇಷದ ತರುಣಿಯನ್ನು ಕಂಡು ತುಸು ಆಶ್ಚರ್ಯಕ್ಕೊಳಗಾದನು.

ಅವನ ಎರಡು ಕಣ್ಣುಗಳು ಎರಡು ಸರೋವರಗಳಂತೆ ಶೋಭಿಸುತ್ತಿರಲು, ಹೆಣ್ಣು ಅಲ್ಲಿ ತೇಲಿ ಮುಳುಗಿ, ಮುಳುಗೇಳುತ್ತ ಉಸಿರು ಕಟ್ಟಿದಂತೆ ತೇಲಾಡಿದಳು.

ತಪಸ್ವಿಯ ಮುಖದಲ್ಲಿ ನಗೆಯ ಮೊಗ್ಗು ಮೂಡಿ ಮೆಲ್ಲನೆ ಅರಳಿತು. ಅವನು ಮಧುರ ಗಂಭೀರ ವಚನದಿಂದ ಹೀಗೆ ನುಡಿದನು:

'ಎಲೆ ತರುಣ ವೀರನೇ, ನೀನು ಯಾರು? ಈ ಕಾಡಿನ ಮಧ್ಯದಲ್ಲಿ ಇಷ್ಟು ಮುಂಬೆಳಗಿನಲ್ಲಿ ಯಾವ ಕೆಲಸದ ನಿಮಿತ್ತ ತಿರುಗುತ್ತಿರುವೆ? ಈ ಚೈತ್ರಪ್ರಭಾತ ರಮ್ಯತೆಯ ಆಸ್ವಾದನೆಯೊ? ಮೃಗಗಳ ಬೇಟೆಯ ವಿನೋದವೊ? ನಿನಗೆ ಯಾವುದರಲ್ಲಿ ಆಸಕ್ತಿಯೆಂದು ಹೇಳು? ನುಡಿ, ಅಂಜದಿರು; ನಾವು ಮುನಿಯುವ ಮುನಿ ಶ್ರೇಷ್ಠರಲ್ಲ!'

'ಅಂಜದಿರು' ಎನ್ನುವ ನುಡಿ ಸೂಸಲು, ವೀರನಾರಿಯ ಮನಸ್ಸಿನಲ್ಲಿ ಬಿಂಕದ ಉರಿ ಭುಗಿಲ್ಲೆಂದು ಉಕ್ಕೇರಿತು. ಎದೆಯ ಹುತ್ತದಲ್ಲಿ ಅದುವರೆಗೆ ಮೋಹಮಂತ್ರದಿಂದ ಮುಗ್ಧವಾಗಿದ್ದ ಅವಳಲ್ಲಿಯ ಪುರುಷತೆ ತಕ್ಷಣ ಹೆಡೆಯೆತ್ತಿತು. ಪ್ರತಿಹಿಂಸೆಗೆ ತಯಾರಾಗಿ ಉದ್ಧಟತನದಿಂದ ಕೋಪಗೊಂಡು ನಿಂತಿತು.

ಅವಳು ನಮಸ್ಕಾರವನ್ನು, ಪೂಜ್ಯ ಬುದ್ಧಿಯನ್ನು, ತಾನು ಹೇಳಬೇಕೆಂದಿದ್ದ ಸವಿ ನುಡಿಗಳನ್ನು ಮರೆತಳು. ನಯ ವಿನಯ ವಿಧೇಯ ಭಾವವನ್ನು ತೊರೆದಳು. ಪ್ರತಿಸ್ಪರ್ಧಿಯು ವೀರಾಲಾಪ ಮಾಡುವಂತೆ, ಕಾಡಿನ ಹೆಂಗಸಿನಂತೆ ಒರಟಾಗಿ ಹೀಗೆ ಹೇಳಿದಳು:

'ನಾವು ಅಂಜುವವರಲ್ಲ! ಭಯವೆಂಬುದನ್ನು ನಾವು ಕಂಡಿಲ್ಲ, ಕೇಳಿಲ್ಲ! ಅಂಜುಬುರುಕರ ರಕ್ಷಣೆಯೇ ನಮ್ಮ ಕುಲಕರ್ಮ. ವಿಷದಂತಹ ಲೋಕ ಕಂಟಕರ ಸಂಹಾರವೇ ನಾವು ಒಲಿದ ಕರ್ತವ್ಯ! ಅಂಜದಿರು! ಅಂಜದಿರು ಎಂದು ಹೇಳಲು, ಎಲೆ ತಪಸ್ವಿ, ನೀನು ಯಾರು?'

ಅದನ್ನು ಕೇಳಿದ ಋಷಿ ಮುನಿಯು, ದಂತಪಂಕ್ತಿಯ ಕಾಂತಿಯೊಡನೆ ಕಿರುನಗೆ ಬೀರಿದನು. ಕಣ್ಣು ಮಿಟುಕಿಸಿದ ನೇರ ದೃಷ್ಟಿಯನ್ನು ಬಿಂಕದ ಅಂಗನೆಯ ಕಡೆ ಹರಿಸುತ್ತ, ಕೊಂಕು ನುಡಿಯ ಬಾಣವನ್ನು ಪ್ರಯೋಗಿಸಿದನು:

'ವೀರಕ್ಕೆ ವಿನಯವೆನ್ನುವುದು ಮುಡಿಯ ಮಾಣಿಕ್ಯ; ವಿನಯವಿಲ್ಲದಿರುವುದೇ ಕುಸಂಸ್ಕೃತಿ! ಬೇಡರ ರೀತಿ ಮಾತು ಮಾತಿಗೆ ಬೀಗುತ್ತ, ಅಹಂಭಾವದಿಂದ ಕೆರಳಿದರೆ ಅದು ಕ್ಷಾತ್ರವಲ್ಲ, ಧೂರ್ತಲಕ್ಷಣ! ತರುಣ ವೀರನೆ, 'ಎಲೆ ತಪಸ್ವಿ, ನೀನು ಯಾರು?' ಎಂದು ನನ್ನನ್ನು ಮೂದಲಿಸಿ ಪ್ರಶ್ನಿಸಿದೆಯಲ್ಲವೆ? ಅದನ್ನು ಹೇಳುತ್ತೇನೆ ಕೇಳಿಸಿಕೊ:

'ಅಲೆದಾಡುವ ಬಡಜೋಗಿಗಳಾದ ನಾವು ಸಾಮಾನ್ಯ ಮನುಷ್ಯರೆಂಬುದು ನಿಜ! ನಾವು ನೆಲೆಯಿಲ್ಲದೆ ಅಲೆದಲೆದು ಗೆಡ್ಡೆಗೆಣಸುಗಳನ್ನು ತಿಂದು, ಮರಗಳ ಆಸರೆಯೆ ನಿವಾಸವಾಗಿರುವವರು. ಬರಿನೆಲದ ಹಾಸಿನಲ್ಲಿ ಬಿದ್ದೆದ್ದು ಬೆಳೆಯುವ ನಾವು ಲೋಗರೆಂಬುದು ದಿಟ! ನಿಮ್ಮಂತೆ ಯೋಗ್ಯತೆ, ನಯ, ನುಣ್ಪು, ಸಿರಿ, ಪೆಂಪು ಇಲ್ಲದ ನಾವು ಸಾಮಾನ್ಯರೆಂಬುದು ದಿಟ! ನೀವು ಯೋಗ್ಯರೆಂಬುದು ಸತ್ಯ! –ಸಾತ್ವಿಕನೆ, ಮುನಿಯದಿರು, ತಾಳ್ಮೆಯಲ್ಲಿಯೆ ಬಾಳ್ಮೆಯಿದೆ. (ನಿನ್ನ ಕಣ್ಣುಗಳಲ್ಲಿ ಕೆಂಪು ಸುಳಿಯಲು, ಅದು ಚೆಲುವಾಗಿ ಹೊಮ್ಮುತ್ತಿದೆ!) ನಾನಾರೆ?

'ಕುರುವಂಶದ ಹೆಸರಿನ ಒಂದು ಅರಸು ಮನೆತನವಿದೆ. ತಿಳಿದಿರುವೆ ಏನು? –ಸುಪ್ರಸಿದ್ಧ ನೀನು. ನಿನಗೆ ಆ ಅಪ್ರಸಿದ್ಧರ ಅರಿವೆಲ್ಲಿ? ಆ ವಂಶದ ಪಾಂಡುರಾಜನಿಗೆ ಪಂಚ ಪಾಂಡವರು ಜನಿಸಿದರು. –ಈ ನೀರಸ ಕಥಾಲಾಪ ನಿನಗೆ ಬೇಸರ! ಯುಧಿಷ್ಠಿರ ಭೀಮರೆಂಬುವರನ್ನು ಕೇಳಿ ತಿಳಿದಿರುವೆಯ? ನಕುಲ ಸಹದೇವರು? ಪಾರ್ಥ ಎಂಬಾತನನ್ನು? ಶ್ರೀಕೃಷ್ಣ ಎಂಬ ಓರ್ವ ಗೊಲ್ಲನನ್ನು? ಆ ಅಖ್ಯಾತರು, ಅಲ್ಪರು, ಅಜ್ಞಾತರು ಆದ ಅವರನ್ನು ನೀನು ತಿಳಿಯೆ!

'ನೀನು ಜಗದ್ವಿಖ್ಯಾತ ವನಚರ! ನಿನಗೆ ಹೇಗೆ ಅಜ್ಞಾತರ ಇತಿಹಾಸ ತಿಳಿಯುತ್ತದೆ? ಇರಲಿ; ನಾನು ಯುಧಿಷ್ಠಿರನಲ್ಲ ಮತ್ತು ಭೀಮನೂ ಅಲ್ಲ; ನಕುಲ ಸಹದೇವರೊಳಗೆ ಒಬ್ಬಾತನೂ ಅಲ್ಲ; ಹಾಗೂ ಕೃಷ್ಣನೆಂಬ ಗೋಪಾಲಕನೂ ಅಲ್ಲ. ಆದರೂ ನಾನು ಧರ್ಮರಾಯನ ಕೃಪಾಪೋಷಿತನಾಗಿದ್ದು, ಭೀಮನ ಪ್ರೀತಿಗೆ ಪಾತ್ರನಾಗಿರುವ ಕೃಷ್ಣ ಪದಕಮಲ ಕಿಂಕರ. ಪಾಂಡವರ ಮಧ್ಯಮ. ಅಲ್ಲದೆ ಧನಂಜಯ ಎನ್ನುವ ದುರ್ಯಶಕ್ಕೆ ಈಡಾಗಿ ತೊಳಲುತ್ತಿರುವ ಅರ್ಜುನ!'

ಎಂದು ನುಡಿ ಬಾಣಗಳ ಬಿರುಮಳೆಯನ್ನು